VK
ವಿಜಯ ಕರ್ನಾಟಕ

**Thursday 14th February 2019, Page No.06**

# The Legislative Assembly passed the RV VV Bill 2019

## ಆದಿಚುಂಚನಗಿರಿ ವಿವಿಗೆ ಒಪ್ಪಿಗೆ

**ಬೆಂಗಳೂರು:** ಮೂರು ಖಾಸಗಿ ವಿವಿಗಳ ವಿಧೇಯಕಗಳಿಗೆ ವಿಧಾನಸಭೆಯಲ್ಲಿ ಬುಧವಾರ ಅಂಗೀಕಾರ ನೀಡಲಾಗಿದೆ.

ಮೈಸೂರು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್ ಸೊಸೈಟಿ (ಎನ್‌ಐಇ) ವಿಶ್ವವಿದ್ಯಾಲಯ ವಿಧೇಯಕ-2019, ಆದಿಚುಂಚನಗಿರಿ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ-2019, ಆರ್‌ವಿ ವಿವಿ ವಿಧೇಯಕ-2019ಕ್ಕೆ ವಿಧಾನಸಭೆ ಅಂಗೀಕಾರ ನೀಡಿತು.

**ಕ್ಲಸ್ಟರ್ ವಿವಿ:** ಬೆಂಗಳೂರಿನ ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮಹಾರಾಣಿ ಮಹಿಳಾ ಕಲಾ, ವಾಣಿಜ್ಯ, ವ್ಯವಸ್ಥಾಪನಾ ಕಾಲೇಜು ಹಾಗೂ ಶ್ರೀಮತಿ ವಿಎಚ್‌ಡಿ ಕೇಂದ್ರೀಯ ಗೃಹ ವಿಜ್ಞಾನ ಸಂಸ್ಥೆಯನ್ನು ಬೆಂಗಳೂರು ಕೇಂದ್ರ ವಿವಿಯಿಂದ ಪ್ರತ್ಯೇಕಿಸಿ ಕ್ಲಸ್ಟರ್ ವಿವಿ ರಚಿಸುವ ಉದ್ದೇಶದ ರಾಜ್ಯ ವಿವಿಗಳ ತಿದ್ದುಪಡಿ ವಿಧೇಯಕವನ್ನು ಅಂಗೀಕರಿಸಲಾಗಿದೆ.



**ಋಣ ಪರಿಹಾರ:** ರಾಷ್ಟ್ರಪತಿಗಳ ಸೂಚನೆ ಮೇರೆಗೆ ಪರಿಷ್ಕೃತ ರೂಪದಲ್ಲಿರುವ ಋಣ ಪರಿಹಾರ ವಿಧೇಯಕ-2018 ಕ್ಕೆ ವಿಧಾನಸಭೆ ಅಂಗೀಕಾರ ನೀಡಿತು. ಸಣ್ಣ ರೈತರು, ಭೂ ರಹಿತ ಕೃಷಿ ಕಾರ್ಮಿಕರು ಹಾಗೂ ದುರ್ಬಲ ವರ್ಗದವರನ್ನು ಮೀಟರ್ ಬಡ್ಡಿ ದಂಧೆಯ ವಿಷವರ್ತುಲದಿಂದ ಹೊರತರುವ ಉದ್ದೇಶದ ವಿಧೇಯಕ ಇದಾಗಿದೆ. ಭೂಸ್ವಾಧೀನ ಕಾಯಿದೆ ತಿದ್ದುಪಡಿ ವಿಧೇಯಕ, ಬಸವ ಕಲ್ಯಾಣ ಅಭಿವೃದ್ಧಿ ಮಂಡಳಿ ತಿದ್ದುಪಡಿ ವಿಧೇಯಕ, ಅನುಸೂಚಿತ ಜಾತಿ, ಅನುಸೂಚಿತ ಬುಡಕಟ್ಟು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕ ಮುಂತಾದ ಮೀಸಲು) ತಿದ್ದುಪಡಿ ವಿಧೇಯಕವನ್ನು ಗದ್ದಲದ ನಡುವೆಯೂ ಪಾಸು ಮಾಡಿಕೊಳ್ಳಲಾಯಿತು.